**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಸಿ 1304/2019**

ಪಿ ಡಬ್ಲ್ಯೂ -1

**ದಿನಾಂಕ 20-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದು ಪಾಟೀ ಸವಾಲು ಶ್ರೀ ಕೆ. ಎ.ಎಸ್. ಆರೋಪಿತರ ಪರ ವಕೀಲರುಃ**

ಆರೋಪಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಖಾತೆಯ ಪಾಸ್ ಪುಸ್ತಕವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ. ನಮಗೆ ಇರುವ 4 ಎಕರೆ ಜಮೀನಿನ ದಾಖಲೆಗಳನ್ನು ಹಾಜರು ಪಡಿಸಲು ಆಗುವುದಿಲ್ಲ. ಈ ನ್ಯಾಯಾಲಯವನ್ನು ಹೊರತು ಪಡಿಸಿ ಬೇರೆಯಲ್ಲೂ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ.

2. ನಮಗೆ 8 ½ ಲಕ್ಷ ಅದಾಯ ಇದೆ ಎಂದು ತಿಳಿಸಲು ಆ ಕುರಿತು ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ದಾಖಲೆಯನ್ನು ಹಾಜರು ಪಡಿಸುತ್ತೇನೆ. ನಾನು ಆದಾಯ ತೆರಿಗೆಯನ್ನು ಪಾವತಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ರೈತನಾಗಿದ್ದೇನೆ ಎಂದು ತಿಳಿಸಿರುತ್ತಾರೆ. ನಾನು ಆ ಸಮಯದಲ್ಲಿ ಪ್ರತಿದಿನ ಹಾಲಿನ ಡ್ಯೆರಿಗೆ 25 ಲೀಟರ್ ಹಾಲನ್ನು ಹಾಕುತ್ತಿದ್ದು ಪ್ರಸ್ತುತ 50 ಲೀಟರ್ ಹಾಲನ್ನು ಹಾಕುತ್ತಿದ್ದೇನೆ. ಆ ಕುರಿತು ರಸೀದಿಯನ್ನು ಹಾಜರು ಪಡಿಸಲು ಸಾಧ್ಯವಿಲ್ಲ ಚೀಟಿಯನ್ನು ಹಾಜರು ಪಡಿಸುತ್ತೇನೆ ಎಂದು ತಿಳಿಸಿರುತ್ತಾರೆ.

**3**. ನಮ್ಮ ಜಮೀನಿನಲ್ಲಿರುವ ದಾಖಲೆಗಳಲ್ಲಿ ತೆಂಗಿನ ತೋಟ ಎಂದು ನಮೂದಾಗಿಲ್ಲ ರಾಗಿ ಬೆಳೆ ಎಂದು ನಮೂದಾಗಿದೆ. ಸಾಮಾನ್ಯವಾಗಿ ಹೊಗೆಸೊಪ್ಪನ್ನು ಬೆಳೆಯಲು ಪರವಾನಿಗೆ ಬೇಕು ಎಂದರೆ ಸರಿ. ನಮ್ಮ ಬಳಿಯು ಸಹ ಹೊಗೆಸೊಪ್ಪನು್ನ ಬೆಳೆಯಲು ಪರವಾನಿಗೆ ಇದೆ. ಅದನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಹೊಗೆಸೊಪ್ಪನ್ನು ಮಾರುಕಟ್ಟೆಗೆ ಬಿಟ್ಟರೆ ನೇರವಾಗಿ

ನಮ್ಮ ಖಾತೆಗೆ ಹಣ ಬರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ.

**4.** ಶುಂಠಿ 2-3 ವರ್ಷಗಳು ಮಾತ್ರ ಬೆಳೆದಿದ್ದು ನಂತರ ಹೊಗೆಸೊಪ್ಪನ್ನು ಬೆಳೆಯುತ್ತಿದ್ದೇವೆ. ಶುಂಠಿ ಬೆಳೆಯುವ ಮತ್ತು ಮಾರಾಟ ಮಾಡುವ ಕುರಿತು ದಾಖಲೆಯನ್ನು ಕೊಟ್ಟಿಲ್ಲ. ಆರೋಪಿಗೆ ತೆಂಗಿನ ಕಾಯಿಗಳನ್ನು 7 ವರ್ಷಗಳ ಕಾಲ ಮನೆಯ ಹತ್ತಿರವೇ ನೀಡಿರುತ್ತೇವೆ. ನನಗೆ ನಿಖರವಾದ ತೂಕ ಗೊತ್ತಿಲ್ಲ. ಆ ಕುರಿತು ಯಾವುದೇ ಒಪ್ಪಂದ ಪತ್ರ ಇರುವುದಿಲ್ಲ. ನನಗೆ ಅಂಥಪ್ಪ ಪರಿಚಯ ಇಲ್ಲ.

**5**. ನಾನು ಇತ್ತೀಚೆಗೆ 4 ವರ್ಷಗಳಿಂದ ಮೊಬೈಲ್ ನ್ನು ಬಳಸುತ್ತಿದ್ದೇನೆ. ಆರೋಪಿಯೊಂದಿಗೆ ನಮಗೆ ಯಾವುದೇ ಮೊಬೈಲ್ ಸಂಪರ್ಕ ಇರುವುದಿಲ್ಲ ನೇರವಾಗಿ ಅವರನ್ನು ಸಂಪರ್ಕ ಮಾಡುತ್ತಿದ್ದೇವು. ಆರೋಪಿ ನನಗೆ ಯಾರು ಎಂದು ಗೊತ್ತಿರದೆ ಇದ್ದರೂ ಸಹ ಆರೋಪಿಗೆ ನಾನು ಯಾವುದೇ ಹಣವನ್ನು ನೀಡದೇ ಇದ್ದರೂ ಸಹ ಅಂಥಪ್ಪನ ಮಾತನ್ನು ಕೇಳಿ ಸುಳ್ಳು ದೂರನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ 4 ಲಕ್ಷ ಹಣವನ್ನು ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

**6**. ಅಂಥಪ್ಪ ಈ ನ್ಯಾಯಾಲಯದಲ್ಲಿ ಸಲ್ಲಿಸಿರುವ ಚೆಕ್ ನ ಸಂಖ್ಯೆಯನ್ನು ನಮೂದಿಸಿ ಆರೋಪಿಯೊಂದಿಗೆ ಇನ್ನೊಂದು ಪ್ರಕರಣದಲ್ಲಿ ರಾಜಿ ಮಾಡಿಕೊಂಡು ಸದರಿ ಈ ನ್ಯಾಯಾಲಯದಲ್ಲಿ ಸಲ್ಲಿಸಿರುವ ಚೆಕ್‌ನ್ನು ಅಂಥಪ್ಪ ಹಿಂದಿರುಗಿಸುವುದಾಗಿ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಚೆಕ್ ನಲ್ಲಿರುವ ಸಂಖ್ಯೆ 000022 ಚಕ್ ಸಂಖ್ಯೆ ಹಾಗೂ ಹುಣಸೂರು ನ್ಯಾಯಾಲಯದಲ್ಲಿ ರಾಜಿ ಸಂದಾನದಲ್ಲಿ ಇರುವ ಚೆಕ್ ಸಂಖ್ಯೆ ಎರಡು ಒಂದೇ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ